ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ನಡವಳಿಗಳು**

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಗೂಲಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಿರುವವರಿಗೆ ಅನುದಾನ ಬಿಡುಗಡೆ ಮಾಡುವ ಕುರಿತು

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ:44:ಸೇಸ್ಥಅ:2013 ದಿ:22.02.2014
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/33/ಯುಇಸಿ/2014, ದಿ:14.11.2014
3. ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ:2:ಟಿಎಫ್‌ಪಿ:2020:2020-21 ದಿನಾಂಕ:01.04.2020
4. ಸರ್ಕಾರದ ಆದೇಶ ಸಂಖ್ಯೆ:ಇಡಿ:11;ಹೆಚ್‌ಪಿಸಿ:2020 ದಿನಾಂಕ:03.040.2020

--*--

**ಪ್ರಸ್ತಾವನೆ:**

ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ದಿನಾಂಕ:10.04.2006ರಂದು 10 ವರ್ಷಗಳಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ದಿನಗೂಲಿ ನೌಕರರನ್ನು ಅವರು 60 ವರ್ಷಗಳ ವಯಸ್ಸು ಪೂರ್ಣವಾಗುವವರೆಗೂ ದಿನಗೂಲಿ ಆಧಾರದ ಮೇಲೆ ಮುಂದುವರಿಸಲು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ಉಲ್ಲೇಖ (1)ರ ಸರ್ಕಾರದ ಅಧಿಸೂಚನೆಯನ್ವಯ ಈ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಗೂಲಿ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು 60 ವರ್ಷಗಳ ವಯಸ್ಸು ಪೂರ್ಣವಾಗುವವರೆಗೂ ದಿನಗೂಲಿ ಆಧಾರದ ಮೇಲೆ ಮುಂದುವರಿಸಲು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಉಲ್ಲೇಖ(3)ರ ಸರ್ಕಾರದ ಆದೇಶದಲ್ಲಿ 2020-21ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆ ಮಾಡಿರುವ ಅನುದಾನದಲ್ಲಿ ವೇತನ, ಇತರೆ ಕಛೇರಿ ವೆಚ್ಚ, ಗೌರವಧನ ಮತ್ತು ದಿನಗೂಲಿ/ಗುತ್ತಿಗೆ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನ ಪಾವತಿಗೆ 1/12 ಭಾಗದ ಅನುದಾನವನ್ನು ಮಾತ್ರ ಬಿಡುಗಡೆ ಮಾಡಲು ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳಿಗೆ ಆರ್ಥಿಕ ಪ್ರತ್ಯಾಯೋಜನೆಯನ್ನು ನೀಡಿ ಆದೇಶ ಹೊರಡಿಸಲಾಗಿರುತ್ತದೆ. ಉಲ್ಲೇಖ(4)ರ ಸರ್ಕಾರದ ಆದೇಶದಲ್ಲಿ ಉಲ್ಲೇಖ (3)ರ ಸರ್ಕಾರದ ಆರ್ಥಿಕ ಪ್ರತ್ಯಾಯೋಜನೆ ಅನ್ವಯ 2020-21ನೇ ಸಾಲಿನಲ್ಲಿ ಒದಗಿಸಿರುವ ಅನುದಾನದಲ್ಲಿ 1/12 ಭಾಗದ ಅನುದಾನವನ್ನು ಬಿಡುಗಡೆ ಮಾಡಿ ಆದೇಶಿಸಲಾಗಿರುತ್ತದೆ.

ಪ್ರಸ್ತುತ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ 16 ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ವಿದ್ಯಾರ್ಥಿನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 18 ದಿನಗೂಲಿ ನೌಕರರಿಗೆ 2020-21ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2202-03-103-2-01-034 ರಡಿಯಲ್ಲಿ ಒದಗಿಸಿರುವ ರೂ.926.00 ಲಕ್ಷಗಳ ಅನುದಾನದಲ್ಲಿ ವೇತನ ಪಾವತಿಸುವ ಸಂಬಂಧ ಪ್ರಾಂಶುಪಾಲರುಗಳಿಗೆ ಅನುದಾನ ಬಿಡುಗಡೆ ಮಾಡಲು ಈ ಆದೇಶ.

**ಆದೇಶ ಸಂಖ್ಯೆ:ಕಾಶಿಇ/ಆಯವ್ಯಯ/ದಿ.ನೌ.ವೇ/08/2020-21, ಬೆಂಗಳೂರು, ದಿನಾಂಕ:20.04.2020**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರ ಸೇವೆಯನ್ನು 60 ವರ್ಷಗಳ ವಯಸ್ಸು ಪೂರ್ಣವಾಗುವವರೆಗೂ ದಿನಗೂಲಿ ಆಧಾರದ ಮೇಲೆ ಮುಂದುವರಿಸಿ ಉಲ್ಲೇಖ(1) ಮತ್ತು (2)ರ ಸರ್ಕಾರದ ಅಧಿಸೂಚನೆಗಳಲ್ಲಿ ಆದೇಶಿಸಿರುವ ಹಿನ್ನಲೆಯಲ್ಲಿ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿನ ಅರ್ಹ ದಿನಗೂಲಿ ನೌಕರರುಗಳಿಗೆ ಮಾರ್ಚ್-2020ರ ಮಾಹೆಯ ವೇತನವನ್ನು ಪಾವತಿಸುವ ಸಂಬಂಧ 2020-21ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ:2202-03-103-2-01-034ರಡಿಯಲ್ಲಿ **ಒಟ್ಟು ರೂ.3,73,698/-**(ರೂ. ಮೂರು ಲಕ್ಷದ ಎಪತ್ಮೂರು ಸಾವಿರದ ಆರುನೂರ ತೊಂಭತ್ತೆಂಟು ಮಾತ್ರ)ಗಳನ್ನು ಪಾವತಿಸುವ ಸಂಬಂಧ ಕಾಲೇಜಿನ ಪ್ರಾಂಶುಪಾಲರುಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.

**(ಮಾನ್ಯ ಆಯುಕ್ತರಿಂದ ಟಿಪ್ಪಣಿ ಅನುಮೋದಿಸಲ್ಪಟ್ಟಿದೆ)**

20/4/2020

**ಕಾಲೇಜು ಶಿಕ್ಷಣ ನಿರ್ದೇಶಕರು**

**ಅನುದಾನ ಬಳಕೆಗೆ ಷರತ್ತುಗಳು :**

1. ಬಿಡುಗಡೆಗೊಳಿಸಿರುವ ಅನುದಾನವನ್ನು ನಿಯಮಾನುಸಾರ ಪರಿಶೀಲಿಸಿ ಬಿಡುಗಡೆಗೊಳಿಸಿರುವ ಉದ್ದೇಶಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ನಿಯಮಗಳನ್ನು ಪಾಲಿಸಿ ಅದರನ್ವಯವೇ ಪಾವತಿಸುವುದು.
2. ಸದರಿ ಅನುದಾನವನ್ನು ಕೆ-2 ತಂತ್ರಾಂಶದಲ್ಲಿ ಕ್ಲೇಮ್ ಮಾಡತಕ್ಕದ್ದು.
3. ಅನುದಾನ ಬಳಕೆಯಾದ ನಂತರ ಕಡ್ಡಾಯವಾಗಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

**ಇವರಿಗೆ:**

1. ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಅಗತ್ಯ ಕ್ರಮಕ್ಕಾಗಿ.
2. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರಕಛೇರಿ, ಬೆಂಗಳೂರು - ಅಂತರ್ಜಾಲದಲ್ಲಿ ಅಳವಡಿಸಲು ಕೋರಿದೆ.

Scanned with CamScanner

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಗೂಲಿ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ 2020-21ನೇ ಸಾಲಿನಲ್ಲಿ ಮಾರ್ಚ್-2020ರ ಮಾಹೆಗೆ ವೇತನ ಪಾವತಿಗೆ ಸಿಬ್ಬಂದಿವಾರು ಬಿಡುಗಡೆ ಮಾಡಬೇಕಾಗಿರುವ ಅನುದಾನದ ವಿವರ

**ಆದೇಶ ಸಂಖ್ಯೆ:ಕಾಶಿಇ/ಆಯವ್ಯಯ/ದಿ.ನೌ.ವೇ/08/2020-21, ಬೆಂಗಳೂರು, ದಿನಾಂಕ:20.04.2020ಕ್ಕೆ ಅನುಬಂಧ**

| ಕ್ರ.ಸಂ | ಸಿಬ್ಬಂದಿಯ ಹೆಸರು | ಕಾಲೇಜಿನ ಹೆಸರು | ಮಾಹೆ | ಬಿಡುಗಡೆ ಮಾಡಬೇಕಾಗಿರುವ ಒಟ್ಟು ಅನುದಾನ |
|---|---|---|---|---|
| 1 | ಮೂರ್ತಿ.ವಿ.ಎಲ್. | ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು | ಮಾರ್ಚ್-2020 | 22393 |
| 2 | ನಾಗರಾಜ.ಎಂ. | ಸರ್ಕಾರಿ ಆರ್.ಸಿ. ಕಾಲೇಜು, ಬೆಂಗಳೂರು | ಮಾರ್ಚ್-2020 | 22393 |
| 3 | ಶಿವರಾಮಯ್ಯ. | ಸರ್ಕಾರಿ ಕಲಾ ಕಾಲೇಜು, ಬೆಂಗಳೂರು | ಮಾರ್ಚ್-2020 | 22393 |
| 4 | ಸಿದ್ದರಾಮಯ್ಯ.ಟಿ. | | ಮಾರ್ಚ್-2020 | 22393 |
| 5 | ಬೆಟ್ಟಯ್ಯ.ಹೆಚ್. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಾ | ಮಾರ್ಚ್-2020 | 19945 |
| 6 | ಗಂಗಮ್ಮ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ | ಮಾರ್ಚ್-2020 | 19945 |
| 7 | ಜಯನರಸಿಂಹ ಮೂರ್ತಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ | ಮಾರ್ಚ್-2020 | 19945 |
| 8 | ಓಬಳೇಶಪ್ಪ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ | ಮಾರ್ಚ್-2020 | 19945 |
| 9 | ಶಿವಲಿಂಗಯ್ಯ.ಎಂ | ಮಹಾರಾಣಿ ಮಹಿಳಾ ಕಲಾ ಕಾಲೇಜು ಮೈಸೂರು | ಮಾರ್ಚ್-2020 | 21169 |
| 10 | ಬಸಮ್ಮ | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ವಿದ್ಯಾರ್ಥಿನಿಲಯ, ಮೈಸೂರು | ಮಾರ್ಚ್-2020 | 21169 |
| 11 | ನಾಗರಾಜೇಗೌಡ | ಸರ್ಕಾರಿ ಕಲಾ ಕಾಲೇಜು ಹಾಸನ | ಮಾರ್ಚ್-2020 | 19945 |
| 12 | ಗಾಯಿತ್ರಿ ಎಂ.ಎಸ್ | ಸರ್ಕಾರಿ ಮಹಿಳಾ ಕಾಲೇಜು ಮಂಡ್ಯ | ಮಾರ್ಚ್-2020 | 19945 |
| 13 | ಶಿವಾನಂದ.ಸಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭದ್ರಾವತಿ | ಮಾರ್ಚ್-2020 | 19945 |
| 14 | ನಂಜೇಗೌಡ | ಐ.ಡಿ.ಎಸ್.ಜಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚಿಕ್ಕಮಂಗಳೂರು | ಮಾರ್ಚ್-2020 | 19945 |
| 15 | ಮೂಕೇಶಪ್ಪ.ಎ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರೇಕೆರೂರು | ಮಾರ್ಚ್-2020 | 19945 |
| 16 | ರಂಗಣ್ಣ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾನ್ವಿ | ಮಾರ್ಚ್-2020 | 19945 |
| 17 | ಶಂಕರ ಅಡಿವೆಪ್ಪ | ಸರ್ಕಾರಿ ಕಾಲೇಜು ಕಲಬುರಗಿ | ಮಾರ್ಚ್-2020 | 21169 |
| 18 | ಹಿರಗೆಪ್ಪ ರುಕ್ಕಪ್ಪಾ | | ಮಾರ್ಚ್-2020 | 21169 |
| | | | ಒಟ್ಟು ಮೊತ್ತ | 3,73,698 |

(ಒಟ್ಟು ರೂ.ಮೂರು ಲಕ್ಷದ ಎಪ್ಪತ್ಮೂರು ಸಾವಿರದ ಆರುನೂರ ತೊಂಬತ್ತೆಂಟು ರೂಪಾಯಿಗಳು ಮಾತ್ರ)

ಕಾಲೇಜು ಶಿಕ್ಷಣ ನಿರ್ದೇಶಕರು

Scanned with CamScanner